ಮಾಡುತ್ತಿದ್ದ. ಸ್ವಂತ ಬುದ್ಧಿ ಕಡಿಮೆ. ಈ ಸುಂದರವಾದ ಸಂಸಾರ ಕೇಶಣ್ಣನ ಮದುವೆಯಾಗುವವರೆಗೆ ಮಾತ್ರ ಅಸ್ತಿತ್ವದಲ್ಲಿತ್ತು. ಎರಡನೇಯವರು ರಾಧಾವೈನಿ ಬಂದ ಅನಂತರ ಎಲ್ಲ ಬದಲಾಗಿತ್ತು. ಅವರೊಂದು ನಾಟಕದ ಪಾತ್ರವಿದ್ದಂತೆ. ಬಣ್ಣಬಣ್ಣದ ಗಿಲೀಟಿನ ಮಾತುಗಳನ್ನಾಡುತ್ತ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದರು. ಜೊತೆಗೆ ಚುಚ್ಚು, ಕೊಂಕು ಮಾತುಗಳನ್ನು ಅವರ ನಾಲಿಗೆ ಹುಟ್ಟಿಸುತ್ತದೇನೋ... ಎಂಬಷ್ಟು ಸಲೀಸಾಗಿ ಹೊರಬರುತ್ತಿದ್ದವು. ಮನೆ ನಾಟಕರಂಗವಾಗಿತ್ತು ಅವರಿಗೆ. ಮೊದಲು ಹಿರಿಯರ ಮಾತು ಕೇಳುತ್ತಿದ್ದ ಕೇಶಣ್ಣ ಈಗ ಹೆಂಡತಿಯ ಮಾತು ಕೇಳಲಾರಂಭಿಸಿದ. ರಾಧಾವೈನಿಗೆ ಬೆಳಗಾವಿ, ಮಿರಜ್‌ಗಳಲ್ಲಿ ನೆಂಟರಿದ್ದರು. ಏನಾದರೂ ನೆವ ಮಾಡಿಕೊಂಡು ಹೊರಟವರು ಹೋಟೆಲ್, ಸಿನಿಮಾ ಎಂದು ಮಜಾ ಮಾಡಿ ಇದ್ದ ದುಡ್ಡು ಖಾಲಿ ಮಾಡಿಕೊಂಡು ಮೇಲಷ್ಟು ಸಾಲ ಮಾಡಿಕೊಂಡೇ ಬರುವುದು. ಇದು ಅಪ್ಪನ ಬಿರುಗಣ್ಣಿಗೆ ಕಾರಣವಾಗುತ್ತಿತ್ತು. ದೊಡ್ಡಣ್ಣ ಸಾಂತ್ವನಿಸುತ್ತಿದ್ದ. ರಾಧಾವೈನಿ, "ಧೊಡ್ಡ ದೇಶಪಾಂಡ್ಯಾರ ಮನಿತನಾ. ಸ್ವಲ್ಪ ರೊಕ್ಕಕ್ಕ ಎಷ್ಟ ಮಾತಾಡತಾರ? ಶ್ರೀಮಂತರಂತ ಮದವಿ ಮಾಡಿಕೊಂಡ ಬಂದದ್ದ ತಪ್ಪಾತು. ನಮ್ಮ ಬಡವರ ಮನ್ಯಾಗ ಇನ್ನೂ ಹೆಚ್ಚು ಮಜಾ ಇತ್ತು. ಬೇಖಾಧಂಗ ಖರ್ಚು ಮಾಡತಿದ್ವಿ" ಎಂದು ಕೊಂಕು ನುಡಿದರೆ ಅವ್ವ, "ರಾಧಾ, ನಾಲಿಗಿ ಹರಿಬಿಡಬ್ಯಾಡಾ. ಮಾತಿನಿಂದ ಸಂಬಂಧ ಕೆಡತಾವ. ಚುಚ್ಚಿ ಮಾತಾಡಬ್ಯಾಡ" ಎಂದು ಹೇಳುತ್ತಲೇ ಇದ್ದರೂ ಚೇಳಿನಂತೆ ಅವರ ಮಾತಿನ ಕೊಂಡಿ ಆಗಾಗ ಕುಟುಕುತ್ತಲೇ ಇತ್ತು.

ಮದುವೆಯಾಗಿ ಬಂದ ಅನಂತರ ರಾಧಾವೈನಿಯ ತಾಯಿ ತೀರಿಹೋದರು. ಹೀಗಾಗಿ, ಅವರ ಎರಡೂ ಬಾಣಂತನಗಳು ನಮ್ಮಲ್ಲೇ ನಡೆದವು. ಮುದುಕಿ ಸಾಬಕ್ಕ ಬೆಳಗ್ಗೆ ಬಂದು ಬಾಣಂತಿ, ಮಗುವನ್ನು ಮೀಯಿಸಿ, ಹೊಟ್ಟೆಗೆ ಬಟ್ಟೆ ಕಟ್ಟಿ, ಕಾಯಿಸಲು ಅಗ್ಗಿಷ್ಟಿಕೆ ಕೊಟ್ಟು ಹೋದರೆ ಮುಂದೆಲ್ಲ ನಾನೇ. ಸಂಜೆ ಕಾಯಿಸಿಕೊಳ್ಳಲು ಅಗ್ಗಿಷ್ಟಿಕೆ ಕೊಡುವುದು, ರಾತ್ರಿ ಕೂಡ ಮಗುವನ್ನು ನೋಡಿಕೊಳ್ಳುವುದನ್ನೆಲ್ಲ ಪ್ರೀತಿಯಿಂದಲೇ ಮಾಡುತ್ತಿದ್ದೆ. ಬಹಳ ದೊಡ್ಡವಳಲ್ಲ... ಹದಿನೈದರ ಪ್ರಾಯ ನನಗೆ. ಮಧ್ಯೆ ಒಮ್ಮೆ ವೈನಿಯ ಕಾಲಿಗೆ ಬಾಗಿಲು ಬಡಿದು ಗಾಯವಾಗಿತ್ತು. ನಾಲ್ಕು ದಿನ ಮಂಚ ಬಿಟ್ಟು ಇಳಿಯಲಾಗಿರಲಿಲ್ಲ. ಹಸಿ ಬಾಣಂತಿ, ಎಳೆಯ ಮಗು ಎಂದು ಅವ್ವ ಕೆಲಸದವರನ್ನೂ ಹತ್ತಿರ ಸೇರಿಸಲಿಲ್ಲ. ಮಗುವಿನದಷ್ಟೇ ಅಲ್ಲ, ವೈನಿಯ ಒಂದು... ಎರಡನ್ನೂ ತೊಳೆದು ಸ್ವಚ್ಛ ಮಾಡಿದಾಗ ನಾನು ಪರದೈವವೇ ಆಗಿದ್ದೆ. ಮೂರು ತಿಂಗಳಾದ ಅನಂತರ ಅದೆಲ್ಲ ಮರೆತುಹೋಗಿತ್ತು. ಮುಂದೆ ನಾನು ರುಕ್ಕು... ಹಿರಿಯರು ಹತ್ತಿರವಿಲ್ಲದಾಗ 'ರುಕ್ಕೀ' ಆಗಿರುತ್ತಿದ್ದೆ.

ನಮ್ಮ ಶಾಲೆಯಲ್ಲೂ ಅಷ್ಟೇ. ಒಂದನೇ... ಎರಡನೇ ವರ್ಗದಲ್ಲಿ ತರಗತಿಯ ತುಂಬ ಮಕ್ಕಳು. ಇದು ಐದನೇ ತರಗತಿಯವರೆಗೂ ಮುಂದುವರೆಯುತ್ತಿತ್ತು. ಅನಂತರ ಸಂಖ್ಯೆ ಕ್ರಮೇಣ ಕ್ಷೀಣವಾಗುತ್ತಿತ್ತು. ಆಳುಮಕ್ಕಳಲ್ಲಿ ಹತ್ತು ವರ್ಷವಾಗುತ್ತಿದ್ದಂತೆ ಕೆಲಸಕ್ಕೆ ಸೇರಿಸುವ ಪರಿಪಾಠ. ಆರು, ಏಳನೇ ಇಯತ್ತೆಯಲ್ಲಿ ಬೆರಳೆಣಿಕೆಯಷ್ಟೇ ಮಕ್ಕಳು ಮುಂದುವರೆಯುತ್ತಿದ್ದರು. ಅವರಲ್ಲಿ ಕೆಲವರು ಹತ್ತನೇ ಇಯತ್ತೆ ಪಾಸಾಗುತ್ತಿದ್ದರು.

ಅನುಕೂಲವಿದ್ದವರು ಕಾಲೇಜು ಕಲಿಯಲು ಬೆಳಗಾವಿಗೋ ಮಿರಜಕ್ಕೋ ಹೋಗುತ್ತಿದ್ದರು. ಮಂಚಿಯೂ ಐದನೇ ತರಗತಿಗೇ ಶಾಲೆ ಬಿಟ್ಟು ಅವ್ವನ ಜೊತೆ ಮೇಲ್ಗೆಲಸಕ್ಕೆ ಬರುತ್ತಿದ್ದಳು. ದೊಡ್ಡವರಿಗೆ ಕಾಣದಂತೆ ಕೊಟ್ಟಿಗೆಯಲ್ಲಿ ಕುಳಿತು ಹರಟುತ್ತಿದ್ದೆವು. ಹೊಲಕ್ಕೆ ಹೋಗುವಾಗ ಜೊತೆಗೆ ಅವಳಿರಲೇಬೇಕು. ಸೀಗಿ ಹುಣ್ಣಿಮೆಗೆ ಚರಗ ಚೆಲ್ಲೋದು, ಸೀತನಿ ತಿನ್ನೋದು, ಕಬ್ಬು ಕಚ್ಚಿ ತಿನ್ನುತ್ತ ರಸ ಹೀರೋದು. ಒಂದೊಂದೂ ಬಂಗಾರದಂಥ ನೆನಪುಗಳು. ಕಬ್ಬಿನ ಬೆಳೆ ಬಂದ ಮೇಲೆ ಯಾರು ಮನೆಗೆ ಬಂದರೂ ಕಬ್ಬಿನ ರಸದ ಸಮಾರಾಧನೆ ಇದ್ದದ್ದೇ. ಜೊತೆಗೆ ಹಚ್ಚಿದ ಅವಲಕ್ಕಿ, ಕರಿದ ಹಪ್ಪಳ